ಅಧ್ಯಕ್ಷರು : ಬಜೆಟ್ ಮೇಲೆ ಚರ್ಚೆ ಮಾಡುವಾಗ ಇದನ್ನೂ ಚರ್ಚೆ ಮಾಡಿ.

ಶಾಲೆಯನ್ನು ಸ್ಥಳಾಂತರಿಸುವ ಬಗ್ಗೆ

100 (1363) ಶ್ರೀ ಶ್ರೀನಿವಾಸ್ (ವಾಸು) ಎಸ್.ಆರ್. : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಬ್ಬಿ ನಗರದಲ್ಲಿರುವ ವಿವೇಕಾನಂದ ವಿದ್ಯಾಪಾಠ ಶಾಲೆಯ ಕಟ್ಟಡದ ಮೇಲೆ ಹೈಟೆನ್ಷನ್‌ಲೈನ್ ಹಾದು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹೈಟೆಕ್ಷನ್ ಲೈನ್ ಹಾದು ಹೋಗುವ ಮಾರ್ಗದಲ್ಲಿ ಅಡಿಗಳು ಕಟ್ಟಡಗಳನ್ನು ಕಟ್ಟಬಾರದು ಇದಕ್ಕೆ ಸರ್ಕಾರ ನಿಗದಿಪಡಿಸಿರುವ ನಿಬಂಧನೆ ಗಳೇನು (ವಿವರಗಳನ್ನು ನೀಡುವುದು);

ಇ) ಶಾಲಾ ಕಟ್ಟಡವನ್ನು ಪ್ರಾರಂಭಿಸಲು ಯಾವ ಆಧಾರದ ಮೇಲೆ ಅನುಮತಿಯನ್ನು ನೀಡಲಾಗಿದೆ.

ಈ) ಅನುಮತಿಯನ್ನು ನೀಡುವಾಗ ಸರ್ಕಾರದ ನಿಬಂಧನೆಗಳನ್ನು ಉಲ್ಲಂಘಿಸಿದಂತಾಗುವುದಿಲ್ಲವೇ;

ಉ) ಹಾಗಿದ್ದಲ್ಲಿ, ನಿಬಂಧನೆಗಳನ್ನು ಉಲ್ಲಂಘಿಸಿದ ಅಧಿಕಾರಿಯ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಊ) ಹೈಟೆನ್ಷನ್ ಲೈನ್ ಹಾದು ಹೋಗಿರುವುದರಿಂದ ಸದರಿ ಶಾಲೆಯಲ್ಲಿ ಸುಮಾರು 500 ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದು ಅವರ ವಿದ್ಯಾಭ್ಯಾಸ ಮತ್ತು ಜೀವದ ಮೇಲೆ ದುಷ್ಪರಿಣಾಮ ಬೀರುವುದಲ್ಲವೇ;

ಋ) ಹಾಗಿದ್ದಲ್ಲಿ, ಈ ವಿದ್ಯಾಪೀಠದ ಶಾಲೆಯನ್ನು ಬೇರೆ ಕಡೆ ಸ್ಥಳಾಂತರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಹಾಗಿದ್ದಲ್ಲಿ ಯಾವಾಗ ಸ್ಥಳಾಂತರಿಸಲಾಗುವುದು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು.

ಆ) ವಿದ್ಯುತ್ ಪರಿವೀಕ್ಷಕರು, ತುಮಕೂರು, ಇವರು ದಿ:29.05.2009 ರಲ್ಲಿ ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮ 1956ರ ನಿಯಮ 77(4) ಮತ್ತು 80ರ ಉಲ್ಲಂಘನೆಯಾಗಿದೆಯೆಂದು ವರದಿ ನೀಡಿರುತ್ತಾರೆ. ಈ ವಿವರಗಳು ಶಿಕ್ಷಣ ಇಲಾಖೆಯಲ್ಲಿ ಲಭ್ಯವಿಲ್ಲ.

ಇ) ಕಟ್ಟಡ ಕಟ್ಟಲು ಅನುಮತಿ ನೀಡುವುದು ನಗರಾಭಿವೃದ್ಧಿ ಪ್ರಾಧಿಕಾರವಾಗಿರುವುದರಿಂದ ಶಿಕ್ಷಣ ಇಲಾಖಾ ವ್ಯಾಪ್ತಿಗೆ ಬರುವುದಿಲ್ಲ.

ಈ) ಹೌದು.

ಉ) ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ.

ಊ) ಸದರಿ ಸಂಸ್ಥೆಯ ಆಡಳಿತ ಕಛೇರಿ ಮೇಲೆ ಬೆಸ್ಕಾಂನ ಹೈಟೆನ್ಷನ್ ತಂತಿ ಹಾದು ಹೋಗಿದ್ದು, ಶಾಲಾ ತರಗತಿ ಕೋಣೆಗಳು ಬೆಸ್ಕಾಂನ ವೈರ್‌ಗೆ ಸಮಾನಾಂತರವಾಗಿ ಅಡ್ಡಗೋಡೆ ನಿರ್ಮಾಣ ಮಾಡಿದ್ದು ಈ ಗೋಡೆಯಿಂದ ಅಂದಾಜು 25 ಅಡಿ ದೂರದಲ್ಲಿ 4, 5 ಮತ್ತು 6ನೇ ತರಗತಿ ಹಾಗೂ ಶಾಲಾ ಕಛೇರಿ ಇರುತ್ತದೆ. ಉಳಿದ 1, 2, 3 ಮತ್ತು 7ನೇ ತರಗತಿಗಳು ನಡೆಯುವ ಕಟ್ಟಡಗಳು ಸುಮಾರು 75 ಅಡಿ ದೂರದಲ್ಲಿರುತ್ತವೆ ಮತ್ತು ಕಟ್ಟಡ ಸ್ಥಳಾಂತರ ಆಗಿರುವುದರಿಂದ ಯಾವುದೇ ದುಷ್ಪರಿಣಾಮ ಆಗುವುದಿಲ್ಲ.

ಋ) ಮಾನ್ಯ ಉಚ್ಚ ನ್ಯಾಯಾಲಯದ ರಿ.ಅ.ಸಂಖ್ಯೆ 243333/05, ದಿ: 5-1-2009 ರಲ್ಲಿನ ತೀರ್ಮಾನದಂತೆ ದಿ: 16.12.2009ರಂತೆ ಶಾಲಾ ಕೊಠಡಿಯನ್ನು ತೆರವುಗೊಳಿಸಲಾಗಿದೆ ಹಾಗೂ ತರಗತಿಗಳನ್ನು ಬೇರೆ ಕಡೆ ನಡೆಸಲಾಗುತ್ತಿದೆ.

ಶ್ರೀ ಶ್ರೀನಿವಾಸ್ (ಪಾಸು) ಎಸ್.ಆರ್. : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಉತ್ತರವನ್ನು ಒದಗಿಸಿರತಕ್ಕಂಥ ಅಧಿಕಾರಿಗಳು ಈ ಸದನಕ್ಕೆ ತಪ್ಪು ಮಾಹಿತಿ ಕೊಟ್ಟಿದ್ದಾರೆ ಎನ್ನುವುದು ನನ್ನ ಅಭಿಪ್ರಾಯ ಗುಬ್ಬಿ ನಗರದಲ್ಲಿರುವ ವಿವೇಕಾನಂದ ವಿದ್ಯಾಪೀಠ-ಶಾಲಾ ಕಟ್ಟಡದ ಮೇಲೆ ಹೈಟೆನ್‌ಷನ್ ಲೈನ್ ಹಾದು ಹೋಗಿರುವ ಬಗ್ಗೆ, ವಿದ್ಯುತ್ ಪರಿವೀಕ್ಷಕರು, ತುಮಕೂರು, ಇವರು ದಿನಾಂಕ: 29-05-2009ರಲ್ಲಿ ಒಂದು ವರದಿ ಕೊಟ್ಟಿದ್ದಾರೆ. ನಿಯಮಬಾಹಿರವಾಗಿ, 220 K.V. ಮತ್ತು 120 K.V. ಎರಡು ಹೈಟೆನ್‌ಷನ್ ಲೈನ್‌ಗಳೂ ಅಲ್ಲಿ ಹಾದು ಹೋಗಿವೆ. ಈ ಶಾಲಾ

ಕಟ್ಟಡವನ್ನು ಸ್ಥಳಾಂತರ ಮಾಡಿ ಎಂದು ದಿನಾಂಕ: 05–01–2009 ರಲ್ಲಿ ಉಚ್ಚನ್ಯಾಯಾಲಯದಲ್ಲಿ ಒಂದು ಆದೇಶ ಕೂಡ ಆಗಿದೆ.

ಈ ಶಾಲಾ ಕಟ್ಟಡವನ್ನು ಸ್ಥಳಾಂತರ ಮಾಡಬೇಕೆಂಬ ಆದೇಶ ಕೂಡ ಆಗಿದೆ. ಈ ರೀತಿಯ ಆದೇಶವಾಗಿದ್ದರೂ ಅವರು ಸುಮಾರು ಒಂದೆರಡು ಕಟ್ಟಡಗಳನ್ನು ಸ್ಥಳಾಂತರ ಮಾಡುವ ರೀತಿಯಲ್ಲಿ ಮಾಡಿ ಇದುವರೆಗೂ ಕೂಡ ಅಲ್ಲಿಯೇ ಶಾಲೆಯನ್ನು ನಡೆಸುತ್ತಿದ್ದಾರೆ. ಆ ಶಾಲೆಯಲ್ಲಿ ಸುಮಾರು 500–600 ಮಕ್ಕಳು ವ್ಯಾಸಂಗ ಮಾಡುತ್ತಿದ್ದು, ಸುಮಾರು 4–5 ವರ್ಷಗಳಿಂದ ಈ ಶಾಲೆ ನಡೆಯುತ್ತಿದೆ. ಇದನ್ನು ಸ್ಥಳಾಂತರ ಮಾಡುವ ದಿಕ್ಕಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಗುಬ್ಬಿ ನಗರದಲ್ಲಿ ವಿವೇಕಾನಂದ ವಿದ್ಯಾಪೀಠವೆಂಬ ಶಾಲೆ ಇದ್ದು, ಅದು 1ನೇ ತರಗತಿಯಿಂದ 7ನೇ ತರಗತಿವರೆಗೆ ಶಾಲೆ ನಡೆಸುತ್ತಿದೆ. ಸದಸ್ಯರು ಹೇಳಿರುವ ಪ್ರಕಾರ ಶಾಲೆಯ ಮೇಲ್ಭಾಗದಲ್ಲಿ high tension line ಹಾದು ಹೋಗಿದ್ದು ಅದು ಸತ್ಯವಿದೆ. ಈ ಕೇಸ್ High Court ನಲ್ಲಿದ್ದು, ದಿ: 16–12–2009ರಲ್ಲಿ High Court ನಲ್ಲಿ ತೀರ್ಮಾನವಾಗಿದೆ. ಅದರ ಪ್ರಕಾರ ತರಗತಿಗಳನ್ನು ನಡೆಸುವುದನ್ನು shift ಮಾಡಿದ್ದಾರೆನ್ನುವ ವರದಿ ನಮ್ಮಲ್ಲಿದೆ. ಹಾಗಾಗಿ, ಮಕ್ಕಳಿಗೆ ಯಾವುದೇ ರೀತಿ ತೊಂಧರೆಯಾಗದಂತೆ ನಿಯಮಾವಳಿಗಳಡಿಯಲ್ಲಿ ಅವರು ಎಷ್ಟು ದೂರದಲ್ಲಿ ಶಾಲೆಯನ್ನು ನಡೆಸಬೇಕೋ ಅಷ್ಟು ದೂರದಲ್ಲಿ ಶಾಲೆಯನ್ನು ನಡೆಸುವುದಕ್ಕೆ ಸೂಕ್ತವಾದ ಕ್ರಮವನ್ನು ತೆಗೆದುಕೊಂಡಿದ್ದೇವೆ. ಈಗ ಅವರು high tension line ಅಡಿಯಲ್ಲಿ ಅಥವಾ ಅದರ ವ್ಯಾಪ್ತಿಯಲ್ಲಿ ಈ ತರಗತಿಗಳನ್ನು ನಡೆಸುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಆದಾಗ್ಯೂ, ಮಾನ್ಯ ಸದಸ್ಯರು ಈ ವಿಷಯದಲ್ಲಿ ಇನ್ನೂ ಹೆಚ್ಚಿನ ತೊಂದರೆ ತೊಡಕು ಏನಾದರೂ ಆಗುತ್ತಿದೆ ಎನ್ನುವ ರೀತಿಯಲ್ಲಿ ತಮ್ಮ ಭಾವನೆಯನ್ನು ವ್ಯಕ್ತಪಡಿಸುತ್ತಿದ್ದಾರೆ, ಆ ಕುರಿತಂತೆ ಸರ್ಕಾರದಿಂದ ಇನ್ನಷ್ಟು ಹೆಚ್ಚು first-hand information ಅಥವಾ ಪ್ರಥಮ ಮಾಹಿತಿ ವರದಿಯನ್ನು ನಾವು ತರಿಸಿಕೊಳ್ಳುತ್ತೇವೆ. ಮಕ್ಕಳಿಗೆ ಯಾವುದೇ ರೀತಿ ತೊಂದರೆಯಾಗದಂತೆ ಮತ್ತು ನಿಯಮಾವಳಿಗಳ ಪ್ರಕಾರ high tension line ಅಡಿಯಲ್ಲಿ ಆ ರೀತಿ ಶಾಲೆಗಳನ್ನು ಕಟ್ಟುವುದು,

ನಡೆಸುವುದು ಸೂಕ್ತವಲ್ಲವೆನ್ನುವಂಥದ್ದಿದೆ. ನಮ್ಮ ಜೊತೆಯಲ್ಲಿ ಅಲ್ಲಿಯ ಸ್ಥಳೀಯ ಅಭಿವೃದ್ಧಿ ಪ್ರಾಧಿಕಾರಗಳೂ ಕೂಡ ಎಚ್ಚರಿಕೆಯನ್ನು ವಹಿಸಿಕೊಳ್ಳ ಬೇಕಾಗುತ್ತದೆ. ಏಕೆಂದರೆ, ಕಟ್ಟಡ ಕಟ್ಟಲು permission ಕೊಡುವವರು ಅಲ್ಲಿಯ ನಗರಸಭೆ, ಪುರಸಭೆಯವರು Permission ಕೊಡಬೇಕಾಗುತ್ತದೆ. ಸ್ಥಳಿಯ ಸಂಸ್ಥೆಯವರು permission ಕೊಡದೇ ಹೋಗಿದ್ದರೆ ಅವರು ಕಟ್ಟಿದ್ದು ಕಾನೂನು ಬಾಹಿರವಾಗುತ್ತದೆ. ಒಮ್ಮೆ ಇವರು permission ಕೊಟ್ಟಿದ್ದಿದ್ದರೆ ಅದು ತಪ್ಪಾಗುತ್ತದೆ. ಹಾಗಾಗಿ, ನಾವು ಅಲ್ಲಿ ಸ್ಥಳಿಯವಾಗಿ ಇನ್ನೂ ಹೆಚ್ಚು ವಿವರಗಳನ್ನು ತೆಗೆದುಕೊಂಡು high tension line ಎದುರುಗಡೆಯಲ್ಲಿ ನಮ್ಮ ಮಕ್ಕಳಿಗೆ ತೊಂದರೆಯಾಗದ ರೀತಿಯಲ್ಲಿ ತರಗತಿಗಳನ್ನು ನಿಯಮಾವಳಿಗಳ ಪ್ರಕಾರ ದೂರ ನಡೆಸುವುದಕ್ಕೆ ಬೇಕಾಗಿರುವ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಪ್ರಶ್ನೆ ಸಂಖ್ಯೆ 101 (1034)
ಮಾನ್ಯ ಸದಸ್ಯರು ಹಾಜರಿರಲಿಲ್ಲ

ಪ್ರಶ್ನೆ ಸಂಖ್ಯೆ 102 (1098)
ಮಾನ್ಯ ಸದಸ್ಯರು ಹಾಜರಿರಲಿಲ್ಲ

ಅಧ್ಯಕ್ಷರು : ಶ್ರೀ ಸಿ.ಎಸ್. ಪುಟ್ಟರಾಜುರವರ ಪ್ರಶ್ನೆ ಕಂದಾಯ ಇಲಾಖೆಗೆ ವರ್ಗಾವಣೆಯಾಗಿದೆ.

ಅನುದಾನ ಹಂಚಿಕೆಯಲ್ಲಿ ತಾರತಮ್ಯ

104 (569) ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಚಿಕ್ಕೋಡಿ ಸದಲಗ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ ಬೆಳಗಾವಿ ಜಿಲ್ಲಾ ಪಂಚಾಯಿತಿಗೆ ವಿವಿಧ ಯೋಜನೆಗಳ